ದಿನಾಂಕಃ 25-02-2026 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀಸವಾಲು: 1 ರಿಂದ 4 ನೇ ಪ್ರತಿವಾದಿಯರ ಪರ ಎ.ಜಿ.ಪಿ ರವರಿಂದ:

ನಾನು ಡಿಪ್ಲೋಮಾ ಸಿವಿಲ್ ಇಂಜನೀಯರ್ ಪದವಿಯನ್ನು ಪಡೆದಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಹಾಗು ನಾನು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ನಾನು 1 ರಿಂದ 7 ನೇ ತರಗತಿವರೆಗೆ ಕೆ.ಪಿ.ಇ.ಎಸ್. ಧಾರವಾಡದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಂತರ 8 ರಿಂದ 10 ನೇ ತರಗತಿಯನ್ನು ವಿ.ಎಮ್. ಹೈಸ್ಕೂಲ ಹುನಗುಂದನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. 8 ನೇ ತರಗತಿ ಪ್ರವೇಶಕ್ಕಾಗಿ 1 ರಿಂದ 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ಪರಿಶೀಲಿಸಿರುತ್ತೇನೆ. ನಾನು 2011 ರಲ್ಲಿ 8 ನೇ ತರಗತಿಯನ್ನು ವಿ.ಎಮ್. ಹೈಸ್ಕೂಲ ಹುನಗುಂದನಲ್ಲಿ ಪ್ರವೇಶ ಪಡೆದಿರುತ್ತೇನೆ. ನಂತರ 10 ನೇ ತರಗತಿ ಮುಗಿದ ನಂತರ ಪ್ರಥಮ ಪಿಯುಸಿ ಯನ್ನು ಎಸ್.ವಿ.ಎಮ್. ಇಲಕಲ್ಲದಲ್ಲಿ ಪ್ರವೇಶ ಪಡೆದಿರುತ್ತೇನೆ. 2014 ರಲ್ಲಿ ನನ್ನ 10 ನೇ ತರಗತಿಯ ವರ್ಗಾವಣೆ ಪ್ರಮಾಣ ಪತ್ರವನ್ನು ಎಸ್.ವಿ.ಎಮ್. ಇಲಕಲ್ಲಗೆ ನೀಡಿರುತ್ತೇನೆ. ನನ್ನ ಶಾಲಾ ದಾಖಲಾತಿಯನ್ನು ನನ್ನ ತಂದೆಯವರು ಮಾಡಿರುತ್ತಾರೆ. 2016 ರಲ್ಲಿ ದ್ವಿತೀಯ ಪಿಯುಸಿ ಉತ್ತೀರ್ಣನಾಗಿರುತ್ತೇನೆ. ಎಸ್.ಆರ್. ಚರಂತಿಮಠ ಗುಳೇದಗುಡ್ಡ ಪಾಲಿಟೆಕ್ನಿಕ್ ಕಾಲೇಜನಲ್ಲಿ ಡಿಪ್ಲೋಮಾ ವ್ಯಾಸಂಗ ಮಾಡಿರುತ್ತೇನೆ. ನನ್ನ ಎಲ್ಲಾ ಶಾಲಾ ದಾಖಲಾತಿಗಳಲ್ಲಿ ನನ್ನ ತಂದೆಯ ಹೆಸರು ಮಹಾಂತೇಶ ಅಂತಾ ಇರುತ್ತದೆ. ಅದೇ ರೀತಿ ನನ್ನ ಎಲ್ಲಾ ಶಾಲಾ ದಾಖಲಾತಿಗಳಲ್ಲಿ ನನ್ನ ತಾಯಿಯ ಹೆಸರು ಮಹಾದೇವಿ ಅಂತಾ ಇರುತ್ತದೆ. ನನ್ನ ತಂದೆಯವರು ಹುನಗುಂದದಲ್ಲಿ ಪಿ.ಎಸ್.ಐ. ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದರು. ನಮ್ಮ ತಂದೆಯವರು 09-04-2024 ರಂದು ಸೇವೆಯಲ್ಲಿದ್ದಾಗ ಮೃತರಾಗಿರುತ್ತಾರೆ. ನಾನು ನನ್ನ ತಂದೆ ಮರಣ ಹೊಂದಿದ ನಂತರ ಅನುಕಂಪದ ಆಧಾರದ ಮೇಲೆ ನೌಕರಿಗಾಗಿ ಮಾನ್ಯ ಪೋಲಿಸ ಅಧಿಕ್ಷಕರು ಬಾಗಲಕೋಟ ಇವರಿಗೆ ಅರ್ಜಿ ಸಲ್ಲಿಸಿರುತ್ತೇನೆಂದರೆ ಸರಿ. ಅದರಲ್ಲಿ ನನ್ನ ತಂದೆಯ ಹೆಸರು ಮಹಾಂತಪ್ಪ ಅಂತಾ ನಮೂದಿಸಿ ಅರ್ಜಿಯನ್ನು ನೀಡಿರುತ್ತೇನೆಂದರೆ ಸರಿ. ಅದೇ ರೀತಿಯಾಗಿ ಪೋಲಿಸ ಅಧೀಕ್ಷಕರು ಬಾಗಲಕೋಟ ರವರು ನನಗೆ ಹಿಂಬರಹ ನೀಡಿದರಲ್ಲಿ ತಂದೆಯ ಹೆಸರು ಮಹಾಂತಪ್ಪ ಮತ್ತು ತಾಯಿ ಹೆಸರು ಮಹಾದೇವಿ ಅಂತಾ ಶಾಲಾ ದಾಖಲಾತಿಗಳಲ್ಲಿ ಹೆಸರುಗಳು ಹೊಂದಾಣಿಕೆ ಇರುವುದಿಲ್ಲ ಅಂತಾ ನನಗೆ ಹಿಂಬರಹ ನೀಡಿರುತ್ತಾರೆ. ದಾವಾ ಪೂರ್ವ ಪ್ರತಿವಾದಿಯರಿಗೆ ನೋಟಿಸ್ಸನ್ನು ನೀಡಿರುವುದಿಲ್ಲ. ನನ್ನ ತಂದೆಯ ಸೇವಾ ಪುಸ್ತಕದಲ್ಲಿ ನನ್ನ ತಂದೆಯ ಹೆಸರು ಮಹಾಂತಪ್ಪ ಹಾಗು ತಾಯಿಯ ಹೆಸರು ಕಮಲಾಕ್ಷಿ ಅಂತಾ ಇರುತ್ತದೆ ಎಂದರೆ ಸರಿ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯನ್ನು ಅವಶ್ಯ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಆದ್ದರಿಂದ ಪ್ರಸ್ತುತ ದಾವೆ ಕಾನೂನಿನಡಿ ನಿಲ್ಲುವುದಿಲ್ಲ ಎಂದರೆ ಸರಿಯಲ್ಲ.

ಶಾಲಾ, ಕಾಲೇಜ ಹಾಗು ಶಿಕ್ಷಣ ಇಲಾಖೆಯನ್ನು ಅವಶ್ಯ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಆದ್ದರಿಂದ ಪ್ರಸ್ತುತ ದಾವೆ ಕಾನೂನಿನಡಿ ನಿಲ್ಲುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡಲು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ಮರುವಿಚಾರಣೆ**:** ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ